# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 718 (962) |
| ಸದಸ್ಯರ ಹೆಸರು | : ಶ್ರೀ ಎಂ. ನಾಗರಾಜು |
| ಉತ್ತರಿಸಬೇಕಾದ ದಿನಾಂಕ | : 27/12/2022 |
| ಉತ್ತರಿಸಬೇಕಾದವರು | : ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ನಗರ ಸ್ಥಳೀಯ ಸಂಸ್ಥೆಗಳ ಸ್ವಾವಲಂಬನೆಗೆ ಆದಾಯ ಮಾರ್ಗಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ನಗರ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆ ಸೇರಿದಂತೆ ನೀರಿನ ಶುಲ್ಕ , ಜಾಹೀರಾತು ಶುಲ್ಕ , ಉದ್ದಿಮೆ ಪರವಾನಿಗೆ ಶುಲ್ಕ ಅಂಗಡಿಗಳು/ ಮಾರಕಟ್ಟೆ / ವಾಣಿಜ್ಯ ಮಳಿಗೆಗಳಿಂದ ಬಾಡಿಗೆ ಸೇರಿದಂತೆ ಇತರೆ ಶುಲ್ಕಗಳನ್ನು ವಿಧಿಸಲು ಮುನಿಸಿಪಲ್ ಕಾಯ್ದೆಗಳಲ್ಲಿ ಅವಕಾಶವಿರುತ್ತದೆ.<br><br>ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಆದಾಯಗಳಲ್ಲಿ ಆಸ್ತಿ ತೆರಿಗೆ ಪಾವತಿಸಲು ಅತಿ ಹೆಚ್ಚಿದ್ದು, ನಗರ ಸ್ಥಳೀಯ ಸಂಸ್ಥೆಗಳನ್ನು ಆರ್ಥಿಕವಾಗಿ ಬಲಪಡಿಸುವ ನಿಟ್ಟಿನಲ್ಲಿ ಆಸ್ತಿ ತೆರಿಗೆ ಪದ್ಧತಿಯಲ್ಲಿ ಸುಧಾರಣಾ ಕ್ರಮಗಳನ್ನು ತರಲಾಗಿದ್ದು, ಚಾಲ್ತಿ ಸಾಲಿನ ಮಾರುಕಟ್ಟೆ ಮಾರ್ಗಸೂಚಿ ಬೆಲೆಗೆ ಅನುಗುಣವಾಗಿ ಆಸ್ತಿ ತೆರಿಗೆ ಜೋಡಣೆ ಮಾಡಲಾಗಿದೆ, ಅದರಂತೆ ಪ್ರತಿ ವರ್ಷ ಆಸ್ತಿ ತೆರಿಗೆ ಪರಿಷ್ಕರಣೆಗೆ ಮಾಡಬೇಕಾಗಿರುತ್ತದೆ. ( ದಿ: 18.02.2021 ರ ಅಧಿಸೂಚನೆಗಳ ಪ್ರತಿಗಳನ್ನು ಲಗತ್ತಿಸಿದೆ).<br><br>ಸರ್ಕಾರದ ಆದೇಶ ಸಂ: ನಅಇ 07 ಯುಡಬ್ಲ್ಯೂಎಸ್ 2011 ಬೆಂಗಳೂರು , ದಿ: 20.07.2011 ರಂತೆ ನೀರಿನ ದರಗಳನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಪರಿಸಷ್ಕರಿಸಬೇಕಾಗಿರುತ್ತದೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಮುನಿಸಿಪಲ್ ಕಾಯ್ದೆಗಳಲ್ಲಿನ ಅವಕಾಶದಂತೆ ಹಾಗೂ ಸಂಬಂಧಿಸಿದ ಸರ್ಕಾರದ ಆದೇಶ/ಸುತ್ತೋಲೆ ಸೂಚನೆ/ ಷರತ್ತುಗಳಿಗೊಳಪಟ್ಟು ಬೈ ಲಾ ಗಳನ್ನು ರಚಿಸಿಕೊಂಡು ಇತರೆ ಶುಲ್ಕಗಳನ್ನು/ ದರಗಳನ್ನು ಪರಿಷ್ಕರಿಸಲು ಅವಕಾಶವಿರುತ್ತದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ – ಕಂದಾಯ ಇಲಾಖೆಯಡಿ ಆದಾಯವನ್ನು ಹೆಚ್ಚಿಸುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br>1. ಕಾಯ್ದೆ ಅನ್ವಯ ತೆರಿಗೆದಾರರು ಘೋಷಿಸಿಕೊಂಡಿರುವ ಘೋಷಣೆಗಳನ್ನು ಪರಿಶೀಲಿಸಿ ವ್ಯತ್ಯಾಸ ಕಂಡುಬಂದ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಸದರಿ ಕಾಯ್ದೆ ಅನ್ವಯ ತೆರಿಗೆದಾರರು ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅನ್ವಯ ಘೋಷಿಸಿಕೊಂಡಿರುವ ಘೋಷಣೆಗಳನ್ನು ಪರಿಶೀಲಿಸಿ ವ್ಯತ್ಯಾಸ ಕಂಡುಬಂದ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸಿ [illegible]<br>2. [illegible] ಪಾವತಿಸುತ್ತಿರುವ [illegible] |

| | | |
|---|---|---|
| | | ವಿವರಗಳನ್ನು ಪಡೆದು, ಸದರಿ ಸ್ವತ್ತುಗಳ ಮಾಲೀಕರು ನಗರ ಪಾಲಿಕೆಯಲ್ಲಿ ವಸತಿ ಉಪಯೋಗವೆಂದು ಆಸ್ತಿ ತೆರಿಗೆ ಘೋಷಿಸಿಕೊಂಡಲ್ಲಿ ಅಂತಹ ಸ್ವತ್ತುಗಳಿಗೆ ಆಸ್ತಿ ತೆರಿಗೆ ಪರಿಷ್ಕರಿಸುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.<br>3. ಪಾಲಿಕೆ ವ್ಯಾಪ್ತಿಯಲ್ಲಿರುವ ಬೃಹತ್ ಕಟ್ಟಡಗಳ ನಿಖರವಾದ ವಿಸ್ತೀರ್ಣವನ್ನು ಟೋಟಲ್ ಸ್ಟೇಷನ್ ಸರ್ವೆ ಮುಖಾಂತರ ಕಂಡುಹಿಡಿದು, ಸದರಿ ವಿವರಗಳನ್ನು ತೆರಿಗೆದಾರರು ಘೋಷಿಸಿಕೊಂಡಿರುವ ಘೋಷಣೆಗಳೊಂದಿಗೆ ತಾಳೆ ಮಾಡಿ ವ್ಯತ್ಯಾಸ ಕಂಡುಬಂದ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.<br>4. ತಪ್ಪಾಗಿ ವಲಯ ವರ್ಗೀಕರಣವನ್ನು ಘೋಷಿಸಿಕೊಂಡಿರುವ ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಪರಿಷ್ಕರಿಸಿ ನಿಗಧಿಪಡಿಸಲಾಗುತ್ತಿರುತ್ತದೆ.<br>ಮೇಲ್ಕಂಡ ಪ್ರಕರಣಗಳಲ್ಲಿ ವ್ಯತ್ಯಾಸದ ಮೊತ್ತ, ವ್ಯತ್ಯಾಸದ ಮೊತ್ತದ ದುಪ್ಪಟ್ಟು ದಂಡ ಮತ್ತು ವ್ಯತ್ಯಾಸದ ಮೊತ್ತಕ್ಕೆ ಬಡ್ಡಿಯೊಂದಿಗೆ ಆಸ್ತಿ ತೆರಿಗೆ ವಸೂಲಾತಿ ಮಾಡಲಾಗುವುದು.<br>5. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಕೈ ಬಿಟ್ಟು ಹೋಗಿರುವ ಸ್ವತ್ತುಗಳನ್ನು ಹಾಗೂ ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡದೇ ಇರುವ ಸ್ವತ್ತುಗಳನ್ನು ಗುರುತಿಸಿ ಆಸ್ತಿ ತೆರಿಗೆ ನಿಗದಿಪಡಿಸಿ ವಸೂಲಾತಿಗೆ ಕ್ರಮ ಕೈ ಗೊಳ್ಳಲಾಗುತ್ತಿರುತ್ತದೆ.<br>6. ಕೆಎಂಸಿ ಕಾಯ್ದೆ 1976 ರ ಅನ್ವಯ ಚರ ಆಸ್ತಿಗಳನ್ನು ಮಾತ್ರ ಮುಟ್ಟುಗೋಲು ಅವಕಾಶವಿತ್ತು. ಆದರೆ , ಬಿಬಿಎಂಪಿ ಕಾಯ್ದೆ 2020 ರಲ್ಲಿ ಚರಾಸ್ತಿ, ಸ್ಥಿರಾಸ್ತಿ ಹಾಗೂ ಬ್ಯಾಂಕ್ ಖಾತೆಗಳನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಕಾಯ್ದೆ ಅನ್ವಯ ಬೇ-ಬಾಕಿದಾರರಿಂದ ಆಸ್ತಿ ತೆರಿಗೆ ವಸೂಲಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಮುಂದುವರೆದಂತೆ, 2008 ನೇ ಸಾಲಿನಲ್ಲಿ ಕೆಎಂಸಿ 1976ರ ಕಾಯ್ದೆಗೆ ತಿದ್ದುಪಡಿ ತಂದು ಪ್ರಕರಣ 108 ಎ ರ ಮೂಲಕ, ಘಟಕ ಪ್ರದೇಶ ಮೌಲ್ಯಾಧಾರಿತ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದ್ದು, ಸದರಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಆಸ್ತಿ ತೆರಿಗೆ ದರಗಳನ್ನು ಪರಿಷ್ಕರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br>2021 ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ-2020 ರನ್ನು ಜಾರಿಗೆ ತರಲಾಗಿರುತ್ತದೆ. ಸದರಿ ಕಾಯ್ದೆಯನ್ವಯ ಘಟಕ ಪ್ರದೇಶ ಮೌಲ್ಯಾಧಾರಿತ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನೇ ಮುಂದುವರಿಸಿದೆ.<br>ಬಿ.ಬಿ.ಎಂ.ಪಿ ಕಾಯ್ದೆ 2020 ಪ್ರಕರಣ 144(1) ರಲ್ಲಿ ವಿಧಿಸಬಹುದಾದ ತೆರಿಗೆಯ ವಾರ್ಷಿಕ ಮೌಲ್ಯದ ಶೇಕಡಾ ಹತ್ತರಷ್ಟು ಮೀರಬಾರದೆಂದು ಉಲ್ಲೇಖಿಸಲಾಗಿದೆ. ಮುಂದುವರೆದು ಪ್ರಕರಣ 144 (2) ರ ತೆರಿಗೆಯ ವಾರ್ಷಿಕ ಮೌಲ್ಯದ ಮೇಲಿನ ದರವನ್ನು ಪ್ರತಿ ವರ್ಷವೂ ಶೇಕಡ 5 ರಷ್ಟು ಪರಿಷ್ಕರಿಸಲು ಅವಕಾಶ ಕಲ್ಪಿಸಿರುವುದು ಪ್ರಕರಣ 144 (1) ಕ್ಕೆ ವ್ಯತಿರಿಕ್ತವಾಗಿರುವ ಹಿನ್ನಲೆಯಲ್ಲಿ ಸಾಮಾನ್ಯ ಪರಿಷ್ಕರಣೆಗೆ ಕ್ರಮ ಕೈಗೊಳ್ಳುವುದು ಸಾಧ್ಯವಾಗುತ್ತಿರುವುದಿಲ್ಲ. ಆದುದರಿಂದ, ಪಾಲಿಕೆಯ ಆದಾಯದ ಹಿತದೃಷ್ಟಿಯಿಂದ ಕಾಯ್ದೆಗೆ ತಿದ್ದುಪಡಿ ತರಲು ಕ್ರಮ ವಹಿಸಲಾಗುತ್ತಿದೆ. |
| ಆ | ಈ ಸ್ಥಳೀಯ ಸಂಸ್ಥೆಗಳಿಗೆ ಬಲವಾದ ಆಂತರಿಕ ಹೊಣೆಗಾರಿಕೆಯನ್ನು ಸಾಧಿಸಲು ಮತ್ತು | ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನವೀನ ಮಾದರಿಯ ಲೆಕ್ಕ ದಾಖಲೆ ನಿಯಮಗಳನ್ನು ಅಳವಡಿಸುವ ಸಂಬಂಧ ಕರ್ನಾಟಕ ಪೌರಸಭೆಗಳ ಲೆಕ್ಕ ಪತ್ರ ಮತ್ತು ಬಜೆಟಿಂಗ್ ನಿಯಮಗಳ-2006 ಅನ್ನು ದಿ: 01.04.2006 ರಿಂದ ಜಾರಿಗೊಳಿಸಲಾಗಿದೆ. ಸದರಿ |

| | | |
|---|---|---|
| | ಸಂಸ್ಥೆಗಳ ಹಣಕಾಸಿನ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು? | ಲೆಕ್ಕ ಪದ್ಧತಿಯಲ್ಲಿ ಆಂತರಿಕ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಅಳವಡಿಸಲಾಗಿದ್ದು, ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ವರದಿಯು ನಿಗಧಿತ ನಮೂನೆಗಳಲ್ಲಿ ಪ್ರಚುರಪಡಿಸಲು ನಿಗಧಿಪಡಿಸಲಾಗಿದೆ.<br><br>ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ನಿಧಿ ಆಧಾರಿತ ದ್ವಿ ನಮೂದು ಲೆಕ್ಕ ಪದ್ಧತಿಯನ್ನು ಅಳವಡಿಸಿಕೊಂಡು ವರ್ಷಾಂತ್ಯದಲ್ಲಿ ಕೆಳಕಂಡ ಹಣಕಾಸಿನ ವರದಿಗಳನ್ನು ತಯಾರಿಸಿ ಪ್ರಚುರಪಡಿಸಬೇಕಾಗಿರುತ್ತದೆ.<br>1. ಬ್ಯಾಲೆನ್ಸ್ ಶೀಟ್<br>2. ಆದಾಯ ಮತ್ತು ವೆಚ್ಚದ ಪಟ್ಟಿ<br>3. ಸ್ವೀಕೃತಿ ಮತ್ತು ಪಾವತಿ ಪಟ್ಟಿ<br>4. ಬಜೆಟ್ ವ್ಯತ್ಯಯ ಪಟ್ಟಿ<br>5. ನಗರ ಕಾರ್ಯನಿರ್ವಹಣಾ ವರದಿ<br>6. ರಾಜ್ಯ ಮಟ್ಟದ ಲೆಕ್ಕ ಸಂಕೇತಗಳು<br>7. ಸಾರ್ವಜನಿಕ ಭಾಗವಹಿಸುವಿಕೆಯೊಡನೆ ಬಜೆಟ್ ತಯಾರಿಕೆಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಈ ಮೇಲಿನ ಕ್ರಮಗಳಿಂದಾಗಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಗೆ ಒತ್ತು ನೀಡಲಾಗಿರುತ್ತದೆ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತರಲು IFMS ತಂತ್ರಾಂಶ ವನ್ನು ಅಳವಡಿಸಿಕೊಳ್ಳಲಾಗಿದ್ದು, ಎಲ್ಲಾ ಪಾವತಿಗಳನ್ನು ಅದರ ಮುಖಾಂತರ ಆನ್ ಲೈನ್ ನಲ್ಲಿ ಪಾವತಿಸಲಾಗುತ್ತಿರುತ್ತದೆ.<br><br>ಪ್ರಕೃತಿ ವಿಕೋಪ ಹಾಗೂ ಇನ್ನಿತರೆ ಸಂದರ್ಭಗಳಲ್ಲಿ ಪರಿಹಾರ, ಸಹಾಯ ಧನಗಳನ್ನು ಫಲಾನುಭವಿಗಳಿಗೆ ಬ್ಯಾಂಕ್ ಖಾತೆಗಳಿಗೆ Direct Benefit Trasnfer ( DBT ) ಮುಖಾಂತರ ನೇರವಾಗಿ ಜಮಾ ಮಾಡಲಾಗುತ್ತಿರುತ್ತದೆ.<br><br>ಆಯವ್ಯದಲ್ಲಿ ವಾಸ್ತವಿಕತೆ ಹೆಚ್ಚಿಸುವ ನಿಟ್ಟಿನಲ್ಲಿ BBMP Fiscal Responsibility and Budget Management Rules – 2021 ಅನ್ನು ಜಾರಿಗೆ ತರಲಾಗಿರುತ್ತದೆ. |

ನ ಅ ಇ 204 ಸಮನ್ವಯ 2022

(ಬಿ.ಎ. ಬಸವರಾಜ)

ಮಾನ್ಯ ನಗರಾಭಿವೃದ್ಧಿ ಸಚಿವರು

**(ಬಿ.ಎ. ಬಸವರಾಜ)**
**ನಗರಾಭಿವೃದ್ಧಿ ಸಚಿವರು**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೪ಎ<br>Part – IVA | ಬೆಂಗಳೂರು, ಗುರುವಾರ, ೧೮, ಫೆಬ್ರವರಿ, ೨೦೨೧ (ಮಾಘ, ೨೯, ಶಕವರ್ಷ, ೧೯೪೨)<br>BENGALURU, THURSDAY, 18, FEBRUARY, 2021 (Magha, 29, SHAKAVARSHA, 1942) | ನಂ.೧೯೨<br>No. 192 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 07 SHASANA 2021, BENGALURU, DATED:18.02.2021**

The Karnataka Municipal Corporations (Amendment) Bill, 2021 ಇದಕ್ಕೆ 2021ರ ಫೆಬ್ರವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 04 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO 04 OF 2021

(First published in the Karnataka Gazette Extra-ordinary on the 18th day of February, 2021)

## THE KARNATAKA MUNICIPAL CORPORATIONS (AMENDMENT) ACT, 2021

(Received the assent of the Governor on the 17th day of February, 2021)

An Act further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy second year of the Republic of India as follows, namely:-

**1. Short title and commencement.-** (1) This Act may be called the Karnataka Municipal Corporations (Amendment) Act, 2021.

(2) It shall be deemed to have come into force with effect from the 19th day of January, 2021.

**2. Amendment of section 108.-** In the Karnataka Municipal Corporations Act, 1976 (Karnataka Act 14 of 1977) (hereinafter referred to as the principal Act), in section 108,

(i) in sub-section (2),-

(a) in clause (b), for the figures, words and brackets "0.3 percent (rupees three per thousand)" and "one percent (rupees ten per thousand)", the figures,

(i) (2)ನೇ ಉಪಪ್ರಕರಣದಲ್ಲಿ,-

(ಎ) (ಬಿ) ಖಂಡದಲ್ಲಿ, "ಶೇಕಡಾ 0.3 ಕ್ಕಿಂತ (ಒಂದು ಸಾವಿರಕ್ಕೆ ಮೂರು ರೂಪಾಯಿಗಳು)" ಮತ್ತು "ಶೇಕಡಾ ಒಂದಕ್ಕಿಂತ (ಒಂದು ಸಾವಿರಕ್ಕೆ ಹತ್ತು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು)" ಮತ್ತು "ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ,-

(i) (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಖಾಲಿ ಭೂಮಿಯ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಬಂಡವಾಳ ಮೌಲ್ಯದ ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು) ಕಡಿಮೆ ಇಲ್ಲದ ಮತ್ತು ಶೇಕಡಾ 0.5ಕ್ಕಿಂತ (ಒಂದು ಸಾವಿರಕ್ಕೆ ಐದು ರೂಪಾಯಿಗಳು) ಹೆಚ್ಚಿಲ್ಲದಂಥ ಶೇಕಡಾ ಪ್ರಮಾಣದಲ್ಲಿ ವಿಧಿಸತಕ್ಕದ್ದು."

(ii) (i), (ii) ಮತ್ತು (iii)ನೇ ಉಪಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಕಟ್ಟಡಕ್ಕೆ ಹೊಂದಿಕೊಂಡಿರುವ ಒಂದು ಸಾವಿರ ಚದರಡಿಯವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡತಕ್ಕದ್ದು ಮತ್ತು ಒಂದು ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ಭೂಮಿಗೆ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರವಾಗಿ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು."

3. **109ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 109ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದಲ್ಲಿ "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. **109ಎ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 109ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**109ಎ. ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.**- (1) 108 ಮತ್ತು 109ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅವುಗಳಲ್ಲಿನ ಯಾವುದೇ ಉಪಬಂಧದ ಅಡಿಯಲ್ಲಿ ನಿರ್ಧರಣೆ ಮಾಡಿದ ಮತ್ತು ವಿಧಿಸಿದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯ ವರ್ಷದಲ್ಲಿ ನಿರ್ಧರಣೆ ಮಾಡತಕ್ಕದ್ದು.

(2) ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು, ಅದರಲ್ಲಿ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆ ಮಾಡತಕ್ಕದ್ದಲ್ಲ:

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಪರಂತು, ನಗರಪಾಲಿಕೆಯು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದರಷ್ಟರ ಮಟ್ಟಿಗೆ ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು:

ಮತ್ತೂ ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿ ಪರಿಷ್ಕರಿಸುವಂತೆ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದಲ್ಲ.

**ವಿವರಣೆ**: "ಹಣಕಾಸು ವರ್ಷ" ಎಂದರೆ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ"

5. **ನಿರಸನ ಮತ್ತು ಉಳಿಸುವಿಕೆಗಳು**.- (1) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 03) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Municipal Corporations (Amendment) Act, 2021 (Karnataka Act 04 of 2021) shall be authoritative text in Kannada language under section-5 A of the Karnataka Official Language Act, 1963 (Karnataka Act 26 of 1963).

**ವಜುಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE